ಕೆಟ್ಟು ಹೋಯ್ತಾ? ಅವಳ ಗಂಡನಾದರೂ ಅದೆಂತಾ ಲಜ್ಜೆಗೆಟ್ಟ ಮನುಷ್ಯ? ಯಾರದೋ ಮನೆಯಲ್ಲಿ ಹೆಂಡತಿಯನ್ನು ತಿಂಗಳುಗಟ್ಟಲೆ ಬಿಟ್ಟಿರುವುದಾ? ಇಂತಾ ಹತ್ತು ಜನರನ್ನು ವರ್ಷಾನುಗಟ್ಟಲೆ ಸಂಭಾಳಿಸುವಷ್ಟು ಯೋಗ್ಯತೆ ದೇವರು ಕೊಟ್ಟಿದ್ದಾನೆ. ವಿಷಯ ದುಡ್ಡಿಗೆ ಸಂಬಂಧಿಸಿದ್ದಲ್ಲ. ಮನಸ್ಸಿಗಾಗುವ ಕಿರಿಕಿರಿಗೆ ಸಂಬಂಧಿಸಿದ್ದು. ಇದು ಉದ್ದಕ್ಕೂ ಹೀಗೇ ಮುಂದುವರಿದುಕೊಂಡು ಬಂದರೆ ನಾಳೆ ಅವಳ ಮಗನ ವಿದ್ಯಾಭ್ಯಾಸದ ಜವಾಬ್ದಾರಿಯನ್ನೂ ಈ ಮನುಷ್ಯ ಹೆಗಲಿಗೇರಿಸಿಕೊಳ್ಳುವುದರಲ್ಲಿ ಅನುಮಾನವಿಲ್ಲ. ಮಗನ ವಿದ್ಯಾಭ್ಯಾಸದ ನೆವದಲ್ಲಿ ಇವಳೂ... ಇವಳೂ ಇಲ್ಲೇ ಝಂಡಾ ಊರಿ... ಬಿಸಿ ತುಪ್ಪ ಅಂದುಕೊಳ್ಳುತ್ತಲೇ ಬಾಯಲ್ಲಿಟ್ಟುಕೊಳ್ಳುವುದಲ್ಲ. ಉಗುಳುವುದೇ ಸೂಕ್ತ ಎಂದು ನಿರ್ಧಾರ ಮಾಡಿಬಿಟ್ಟಳು ಶ್ರಾವಂತಿ.

★★★

ನಕುಲ ಕೇತಕಿಯನ್ನು ರೈಲು ಹತ್ತಿಸಿ ಬೀಳ್ಕೊಟ್ಟು ಬಂದ. ಕಿಡಿ ಸೋಕಿದರೆ ಸಾಕು, ಭಗ್ಗನೆ ಹೊತ್ತಿಕೊಳ್ಳುವಂತೆ ಕಾದಿದ್ದಳು ಶ್ರಾವಂತಿ.

“ಮನೆಯೆಲ್ಲಾ ಭಣಭಣ ಅಂತಿದೆ ಅಲ್ವಾ? ಎರಡು ತಿಂಗಳು ಕಳೆದಿದ್ದೇ ಗೊತ್ತಾಗ್ಲಿಲ್ಲ...” ಶೂ ಕಳಚುತ್ತಾ ಲೋಕಾರೂಢಿಯಾಗಿ ನಕುಲ ಹೇಳುವುದೊಂದೇ ತಡ,

“ಯಾಕೆ ಕಳಿಸಿ ಬಂದೆ? ಇಟ್ಕೋಬೇಕಿತ್ತು ಇಲ್ಲೇ...” ಪ್ರತ್ಯುತ್ತರಿಸಿದಳು ಶ್ರಾವಂತಿ.

“ಅದು ಹ್ಯಾಗಾಗ್ತಿತ್ತು, ಪ್ರಥ್ವಿಗೆ ಸ್ಕೂಲು ಶುರುವಾಗ್ಲಿಲ್ವಾ?”

“ಇಲ್ಲೇನು ಸ್ಕೂಲಿಗೆ ಬರಗಾಲ ಬಂದಿದ್ಯಾ? ಇಲ್ಲೇ ಸೇರಿಸ್ಬೋದಿತ್ತಪ್ಪಾ...”

“ಯಾಕೇ, ಒಂಥರಾ ಮಾತಾಡ್ತಿದ್ದಿ? ಅವಳಿಗೇನು ಮನೆಮಠ ಇಲ್ಲಾಂದ್ಕೊಂಡಿದೀಯಾ?”

“ಮನೆಮಠ ಅಂತ ಜವಾಬ್ದಾರಿ ಇರೋರು ತಿಂಗಳುಗಟ್ಲೆ ಯಾರದೋ ಮನೇಲಿ ನಿಶ್ಚಿಂತೆಯಿಂದ ಇದ್ಬಿಡ್ತಾರಾ?”

“ಯಾರ ಮನೆ? ಅವಳ ಸ್ವಂತ ಸೋದರಮಾವನ ಮನೆ. ಒಂದರ್ಥದಲ್ಲಿ ತೌರುಮನೇನೇ...”

ನಕುಲ ಕೇತಕಿಯನ್ನು ವಹಿಸಿಕೊಂಡಷ್ಟೂ ಶ್ರಾವಂತಿಯ ಅಸಹನೆ ಏರುತ್ತಾ ಹೋಯ್ತು. ಇಷ್ಟು ವರ್ಷಗಳಲ್ಲಿ ಯಾವತ್ತೂ ಕೇಳದ ಮಾತುಗಳನ್ನು ಕೇಳಿಬಿಟ್ಟಳು ಶ್ರಾವಂತಿ,

“ಅಷ್ಟಿದ್ದೋನು ನೀನೇ ಅವಳನ್ನ ಯಾಕೆ ಮದುವೆ ಆಗ್ಬಾರ್ದಾಗಿತ್ತು? ಎಷ್ಟಾದ್ರೂ ಅಕ್ಕನ ಮಗಳು. ಹಕ್ಕಿನ ಹೆಣ್ಣು...”

‘ನೀನಾ, ನೀನಾ ಈ ಮಾತಾಡ್ತಿರೋದು?’ ಅನ್ನುವಂತೆ ನಕುಲ ಬೆರಗುಗಣ್ಣುಗಳಿಂದ ಅವಳ ಮುಖ ನೋಡಿದ.

“ಯಾಕೆ ಹಾಗೆ ಬಿಟ್ಟ ಕಣ್ಣು ಬಿಟ್ಕೊಂಡು ನೋಡ್ತಿದ್ದಿ? ಅವಳನ್ನ ಹೊಗಳಿ ಅಟ್ಟಕ್ಕೇರಿಸೋದನ್ನ ನೋಡಿ ನೋಡಿ ಸಾಕಾಗಿ ಹೋಗಿದೆ ನಂಗೆ. ಒಳಗೂ, ಹೊರಗೂ ನಾನು ದುಡಿಯೋದು ನಿನ್ನ ಕಣ್ಣಲ್ಲಿ ದೊಡ್ಡ ವಿಷಯಾನೇ ಅಲ್ಲ ಅನ್ನಿಸ್ತಿದೆ...”

“ಹುಚ್ಚು ಹಿಡಿದಿದ್ಯಾ ನಿಂಗೆ?”

“ಅದೊಂದು ಬಾಕಿಯಾಗಿದೆ” ಅಂದಳು ಶ್ರಾವಂತಿ.

ನಕುಲ ಸಹನೆ ಕಳೆದುಕೊಳ್ಳಲಿಲ್ಲ.

“ಬಾ ಇಲ್ಲಿ, ನಿಧಾನವಾಗಿ ಕೂತ್ಕೊಂಡು ಮಾತಾಡು...” ಎನ್ನುತ್ತಾ ಸೋಫಾದಲ್ಲಿ ತನ್ನ ಪಕ್ಕದ ಜಾಗವನ್ನು ಕೈಯಿಂದ ತಟ್ಟಿದ.